ಸಾಕ್ಷಿಯನ್ನು ದಿನಾಂಕಃ **31-03-2021** ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.
ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರ ವಕೀಲರಾದ ಶ್ರೀ ಕೆ ಎಸ್ ಎಂ ರವರಿಂದಃ

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತದೆ.

ನಾನು ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ದಿನಾಂಕಃ 13-04-2017 ರಂದು ವಾದಿಯಾದ ನನ್ನ ತಂದೆಯು ನನಗೆ ಬರೆದುಕೊಟ್ಟಿರುವ ವಿಶೇಷ ಅಧಿಕಾರವನ್ನು ಹಾಜರುಪಡಿಸಿದ್ದ ಅದನ್ನು ನಿಪಿ 1 ಎಂದು, ದಿನಾಂಕಃ 29-09-1980 ರ 1 ನೇ ಪ್ರತಿವಾದಿಯು ನನ್ನ ತಂದೆಯ ಹೆಸರಿಗೆ ಬರೆದುಕೊಟ್ಟಿರುವ ನೋಂದಾಯಿತ ಕ್ರಯ ಪತ್ರದ ಮೂಲ ಪ್ರತಿಯನ್ನು ನಿಪಿ 2 ಎಂದು, ಕೈ ಬರಹದ ಮ್ಯುಟೇನಶ್ ಪ್ರತಿಯ ದೃಢೀಕೃತ ನಕಲನ್ನು ನಿಪಿ 3 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಮೂರು ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 4 ರಿಂದ 6 ಎಂದು, ದಿನಾಂಕಃ 31-08-2012 ರಲ್ಲಿ 1 ನೇ ಪ್ರತಿವಾದಿಗೆ ಕಳುಹಿಸಿದ ಲೀಗಲ್ ನೋಟಿಸ್ ನ ಕಛೇರಿ ಪ್ರತಿಯನ್ನು ನಿಪಿ 7 ಎಂದು, ಸದರಿ ನೋಟಿಸ್ ನ್ನು 1 ನೇ ಪ್ರತಿವಾದಿಯು ತೆಗೆದುಕೊಳ್ಳದೇ ತಿರಸ್ಕರಿಸಿ ಹಿಂದಿರುಗಿದ ಬಗ್ಗೆ ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 8 ಎಂದು, ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಗಿದ್ದು, ಅದರೊಳಗಿದ್ದ ನೋಟಿಸ್ ಪ್ರತಿಯನ್ನು ನಿಪಿ 8 ಎ ಎಂದು, ಒಂದು ಮ್ಯುಟೇಶನ್ ಪ್ರತಿಯ ದೃಢೀಕೃತ ನಕಲನ್ನು ನಿಪಿ 9 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

ಸಾಕ್ಷಿಯ ಪಾಟೀಸವಾಲಿಗಾಗಿ ಪ್ರತಿವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**